ಅಧ್ಯಕ್ಷರು:– ಆಯಿತು. ಮಾನ್ಯ ಅರಬೈಲ್ ಶಿವರಾಮ್ ಹೆಬ್ಬಾರ್‌ವರೇ, ನಿಮ್ಮ ಪ್ರಶ್ನೆ ವರ್ಗಾವಣೆ ಆಗಿದೆ.

ಅರ್ಕಾವತಿ ನದಿ ಪುನಃಶ್ಚೇತನ ಕಾಮಗಾರಿ

69 (1505); ಶ್ರೀ ವಿಶ್ವನಾಥ್ ಎಸ್.ಆರ್.

ಅ) ಅರ್ಕಾವತಿ ನದಿ ಪುನಶ್ಚೇತನ ಕಾಮಗಾರಿ ಎಷ್ಟು ಪ್ರಮಾಣದಲ್ಲಿ ಪೂರ್ಣಗೊಂಡಿದೆ; ಇದಕ್ಕಾಗಿ ತಗಲಿರುವ ಅಂದಾಜು ವೆಚ್ಚವೆಷ್ಟು;

ಆ) ಹಾಗಿದ್ದಲ್ಲಿ, ಇನ್ನೂ ಬಾಕಿ ಇರುವ ಕಾಮಗಾರಿಗಳೆಷ್ಟು; ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಅರ್ಕಾವತಿ ನದಿ ಪುನಶ್ಚೇತನ ಕಾಮಗಾರಿಯನ್ನು ಒಟ್ಟು 3 ಹಂತಗಳಲ್ಲಿ ಕೈಗೊಳ್ಳಲಾಗಿದೆ. ಕಾಮಗಾರಿಯ ಪ್ರಸ್ತುತ ಹಂತ ಮತ್ತು ವೆಚ್ಚದ ವಿವರಗಳು ಈ ಕೆಳಕಂಡಂತಿದೆ:

(1) ನಂದಿಬೆಟ್ಟದ ಹೆಸರಘಟ್ಟದ ಜಲಾಶಯದವರೆಗಿನ ಹೆಸರಘಟ್ಟ ಉಪ ಜಲಾನಯನದಲ್ಲಿ ₹ 9.95 ಕೋಟಿಗಳ (ಪ್ಯಾಕೇಜ್–1) ಸರಣಿ ಕೆರೆಗಳ ಮುಖಾಂತರ ಹರಿಯುವ ಹಳ್ಳ ಮತ್ತು ಉಪಹಳ್ಳಗಳು ಒಟ್ಟು 476.51 ಕಿ.ಮೀ. ಉದ್ದವಿದ್ದು, ಇದರಲ್ಲಿ ಈವರೆಗೂ 405 ಕಿ.ಮೀ. ಉದ್ದದ ಪುನಶ್ಚೇತನ ಕಾಮಗಾರಿ ಪೂರ್ಣಗೊಂಡಿದ್ದು (ಶೇಕಡ 85%) ಇದುವರೆವಿಗೂ ₹ 915.15 ಲಕ್ಷ ವೆಚ್ಚವಾಗಿರುತ್ತದೆ.

(2) ಕುಮುದ್ವತಿ ನದಿಯ ಉಗಮ ಸ್ಥಾನದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಕುಮುದ್ವತಿ ಉಪ ಜಲಾನಯನ ₹ 8.06 ಕೋಟಿಗಳ (ಪ್ಯಾಕೇಜ್–2) ಸರಣಿ ಕೆರೆಗಳ ಮುಖಾಂತರ ಹರಿಯುವ ಹಳ್ಳ ಮತ್ತು ಉಪಹಳ್ಳ

ಒಟ್ಟು 459.77 ಕಿ.ಮೀ. ಉದ್ದವಿದ್ದು, ಇದರಲ್ಲಿ ಈವರೆಗೂ 248 ಕಿ.ಮೀ. ನಷ್ಟು ಉದ್ದದ ಪುನಶ್ಚೇತನ ಕಾಮಗಾರಿ ಪೂರ್ಣಗೊಂಡಿದ್ದು (ಶೇಕಡ 54%) ಇದುವರೆವಿಗೂ ₹ 361.10 ಲಕ್ಷ ವೆಚ್ಚವಾಗಿರುತ್ತದೆ.

(3) ಹೆಸರಘಟ್ಟ ಜಲಾಶಯದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಅರ್ಕಾವತಿ ಉಪ ಜಲಾನಯನ ₹ 6.07 ಕೋಟಿಗಳ (ಪ್ಯಾಕೇಜ್–3) ಸರಣಿ ಕೆರೆಗಳ ಮುಖಾಂತರ ಹರಿಯುವ ಹಳ್ಳ ಮತ್ತು ಉಪಹಳ್ಳ ಒಟ್ಟು 382.78 ಕಿ.ಮೀ. ಉದ್ದವಿದ್ದು, ಇದರಲ್ಲಿ ಈವರೆಗೂ 295 ಕಿ.ಮೀ. ನಷ್ಟು ಉದ್ದದ ಪುನಶ್ಚೇತನ ಕಾಮಗಾರಿ ಪೂರ್ಣಗೊಂಡಿದ್ದು (ಶೇಕಡ 77%) ಇದುವರೆವಿಗೂ ₹ 571.88 ಲಕ್ಷ ವೆಚ್ಚವಾಗಿರುತ್ತದೆ.

ಮೂರು ಹಂತಗಳನ್ನು ಒಳಗೊಂಡಂತೆ ಹಳ್ಳದ ಉದ್ದ ಒಟ್ಟಾರೆಯಾಗಿ 1,319 ಕಿ.ಮೀ. ಆಗಿದ್ದು, ಇದರಲ್ಲಿ ಈವರೆಗೂ 948 ಕಿ.ಮೀ. ನಷ್ಟು ಉದ್ದ ಪೂರ್ಣಗೊಂಡಿದ್ದು (ಶೇಕಡ 72%) ₹ 1848.13 ಲಕ್ಷ ವೆಚ್ಚವಾಗಿರುತ್ತದೆ.

ಆ) ಬಾಕಿ ಉಳಿದ 371 ಕಿ.ಮೀ. ಉದ್ದದ ಕಾಮಗಾರಿಯನ್ನು ಮಾರ್ಚ್ 2015 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಸಚಿವರು ಓದಗಿಸಿದ್ದಾರೆ. ಅರ್ಕಾವತಿ ನದಿ ಮತ್ತು ಕುಮುದ್ವತಿ ನದಿ ಪುನಶ್ಚೇತನಕ್ಕೆ ಹಿಂದಿನ ಸರ್ಕಾರ 23 ಕೋಟಿ ರೂಪಾಯಿ ಮಂಜೂರು ಮಾಡಿತ್ತು. ಅದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಒಟ್ಟು 3 ಹಂತದಲ್ಲಿ ಪುನಶ್ಚೇತನ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ. ಪುನಶ್ಚೇತನ ಮಾಡಬೇಕಾಗಿರುವುದು ಒಟ್ಟು 1319 ಕಿ.ಮೀ. ಆಗಿದ್ದು, ಈಗಾಗಲೇ 948

ಕಿ.ಮೀ. ನಷ್ಟು ಮುಖ್ಯ ಕಾಲುವೆ, ರಾಜ ಕಾಲುವೆ, ಸಬ್ ಕಾಲುವೆಗಳನ್ನು ತೆರವು ಮಾಡಿ ಕೆರೆಯಿಂದ ಕೆರೆಗೆ ಸಂಪರ್ಕವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಹಿಂದೆ ಮಾನ್ಯ ಸಚಿವರಿಗೆ ಒಂದು ಪತ್ರವನ್ನು ಬರೆದು ಇದನ್ನು ನೋಡುವ accountability ಯಾರಿಗೆ ಇದೆ ಎಂದು ಕೇಳಿದ್ದೆ. ಈಗ ಕಾವೇರಿ ನಿಗಮದಿಂದ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ನಂದಿ ಬೆಟ್ಟ ಮತ್ತು ಶಿವಗಂಗೆ ಬೆಟ್ಟದಿಂದ ತಿಪ್ಪಗೊಂಡನಹಳ್ಳಿ ಕೆರೆಗೆ ಹೋಗುವತನಕ ಇರುವ ನಾನಾ ಕಾಲುವೆಗಳ ಕೆಲಸ ಆಗುತ್ತಿದೆ. ಆದರೆ, ಇದರ accountability ಯಾರು? ಅಂದರೆ, ಇಷ್ಟು ಜನ ಇಂಜಿನಿಯರ್‌ಗಳು ನಿಮ್ಮಲ್ಲಿ ಇದ್ದಾರೆಯೇ ಎಂಬುದು ಪ್ರಶ್ನೆಯಾಗಿದೆ. ಸದರಿ ಕೆಲಸ ಸರಿಯಾಗಿ ಆಗುತ್ತಿಲ್ಲ ಇದು ಕೇವಲ ತೋರಿಕೆಗೆ ಮಾತ್ರ ಆಗುತ್ತಿದೆ ಎಂದು ನಾನು ಈ ಹಿಂದೆ ಪತ್ರ ಬರೆದಿದ್ದಾಗ ಹೇಳಿದ್ದೆ. 7 ಜನ ಶಾಸಕರ ಕ್ಷೇತ್ರದಲ್ಲಿ ಈ ಕೆಲಸ ಆಗಬೇಕಾಗಿದೆ. ಈ 7 ಜನ ಇರತಕ್ಕಂಥ ಕ್ಷೇತ್ರದ ಆಯಾ ಜಿಲ್ಲಾ ಪಂಚಾಯತ್‌ಗಳ ಇಂಜಿನಿಯರ್ಸ್ ಅನ್ನು ಇದರ ಜೊತೆಗೆ ಸೇರಿಸಿಕೊಳ್ಳಿ ಎಂದು ಹೇಳುತ್ತೇನೆ. ಏಕೆಂದರೆ, ಇದಕ್ಕೆ ಮೀಸಲಿಟ್ಟ ಹಣ ವ್ಯರ್ಥವಾಗಬಾರದೆಂಬುದು ನಮ್ಮ ಉದ್ದೇಶ.

ಅಧ್ಯಕ್ಷರು:– ಈಗ ಏನಾಗಬೇಕಾಗಿದೆ ಎಂದು ಕೇಳಿ. ಮಾರ್ಚ್ 2015ರ ಅಂತ್ಯಕ್ಕೆ ಪೂರ್ಣವಾಗುತ್ತದೆಂದು ಉತ್ತರದಲ್ಲಿ ಹೇಳಿದ್ದಾರೆ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, 918 ಕಿ.ಮೀ. ಕಾಲುವೆಯನ್ನು ಈಗಾಗಲೇ ದುರಸ್ಥಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಅದು ಆಗಿಲ್ಲವೆಂಬುದು ನನ್ನ ಪ್ರಶ್ನೆಯಾಗಿದೆ. ಎರಡನೇ ಪ್ರಶ್ನೆ ಏನೆಂದರೆ, ಕಾಲುವೆಯನ್ನು ಏನು ದುರಸ್ಥಿ ಮಾಡಿಕೊಂಡು ಬರಲಾಗಿದೆಯೋ ಆ ಕಾಲುವೆಗೆ ಮಾದಾವಾರ ವ್ಯಾಪ್ತಿಯಲ್ಲಿನ BWSSB ಯ ಕೊಳಚೆ ನೀರು ತಿಪ್ಪಗೊಂಡಹನಳ್ಳಿ ಮತ್ತು ಮಂಚನಬೆಲೆ ಕೆರೆಗೆ ಹೋಗುತ್ತಿದೆ. ಈಗ ನದಿ ಪೂರ್ಣವಾಗಿ ಒಣಗಿ ಹೋಗಿದೆ. ನದಿಯಲ್ಲಿ ನೀರಿಲ್ಲ, ಮಳೆ ಬಂದಾಗ ಮಾತ್ರ ನೀರು ಸ್ವಲ್ಪ ಬರುತ್ತದೆ. ಈಗ ತಾವು ಬಾಕಿ ಇಟ್ಟುಕೊಂಡಿರುವ ಕಾಮಗಾರಿಯಲ್ಲಿ BWSSB ಯಿಂದ ಬರತಕ್ಕಂಥ ಅಂದರೆ ಬೆಂಗಳೂರಿನಿಂದ ಬರತಕ್ಕಂಥ ಕೊಳಚೆ ನೀರು ಹೋಗಿ ಅಲ್ಲಿನ 2–3 ಕ್ಷೇತ್ರಗಳ ಅಂತರ್ಜಲದ

ನೀರು ಕಲುಷಿತಗೊಂಡಿದೆ. ಈ ನೀರನ್ನು ಯಾರೂ ಕುಡಿಯಬಾರದೆಂದು ಸರ್ಟಿಫಿಕೇಟ್ ಅನ್ನು ಸಹ ಕೊಟ್ಟಿದ್ದಾರೆ. ಅದಕ್ಕೋಸ್ಕರ ಯಾವುದೇ ಒಂದು ಕ್ರಿಯಾ ಯೋಜನೆಯನ್ನು ಸಹ ಮಾಡಿಲ್ಲ.

ಅಧ್ಯಕ್ಷರು:– ಈ ವಿಷಯವೆಲ್ಲವನ್ನು ನೀವು ಅದರಲ್ಲಿ ಕೇಳಿಲ್ಲ. ನೀವು ಕೇಳಿರುವ ಪ್ರಶ್ನೆಗೆ ಮಾತ್ರ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, ಉಳಿಕೆ ಕಾಮಗಾರಿಯಲ್ಲಿ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನೊಂದು ವಿಷಯ ಏನೆಂದರೆ, ಮಾನ್ಯ ಸಚಿವರು ನೀಡಿದ್ದ ಎರಡು–ಮೂರು ಹೇಳಿಕೆಯನ್ನು ನಾನು ನೋಡಿದ್ದೇನೆ.

ಅಧ್ಯಕ್ಷರು:– ತಾವು ದಯವಿಟ್ಟು ಪ್ರಶ್ನೆ ಕೇಳಿ. ಈ ರೀತಿಯಾಗಿ ಚರ್ಚೆ ಮಾಡುವುದಾದರೆ ಚರ್ಚೆಗೆ ಅರ್ಜಿ ಹಾಕಿಕೊಳ್ಳಿ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುತ್ತಿಲ್ಲ. ಥೇಮ್ಸ್ ನದಿ ರೀತಿಯಲ್ಲಿ ಅರ್ಕಾವತಿ ನದಿಯ ಪಾತ್ರವನ್ನು ಅಭಿವೃದ್ಧಿ ಮಾಡುತ್ತೇನೆಂದು ಹೇಳಿದ್ದರು. ಆದ್ದರಿಂದ, ಇದಕ್ಕಾಗಿ ಮೀಸಲಿಟ್ಟಿರುವ ಅನುದಾನದಲ್ಲಿಯೇ ಆ ಕೆಲಸವನ್ನು ಮಾಡುತ್ತಾರೆಯೇ ಅಥವಾ ಬೇರೆ ಏನಾದರು ವಿಶೇಷವಾದಂಥ ಕ್ರಿಯಾ ಯೋಜನೆಯನ್ನು ಮಾಡಲಾಗಿದೆಯೇ ಎಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮೂರು ಹಂತದಲ್ಲಿ ತೆಗೆದುಕೊಂಡಿರುವ ಒಂದು ಯೋಜನೆ ಇದಾಗಿದೆ. 1319 ಕಿ.ಮೀ. ಉದ್ದದ ಕಾಲುವೆ ಕಾಮಗಾರಿಗೆ ಮೀಸಲಿಟ್ಟ ಸುಮಾರು 24 ಕೋಟಿ ರೂಪಾಯಿಯಲ್ಲಿ ಈಗಾಗಲೇ ಸುಮಾರು 1848.13 ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಇನ್ನೂ 371 ಕಿ.ಮೀ. ಉದ್ದದ ಕಾಮಗಾರಿ ಬಾಕಿ ಇದೆ. ಆ ಕೆಲಸವನ್ನು ಮಾರ್ಚ್ ತಿಂಗಳ ಅಂತ್ಯಕ್ಕೆ ಪೂರ್ಣಗೊಳಿಸುವುದಕ್ಕೆ ನಾವು ಬಯಸಿದ್ದೇವೆ. ಈಗ ಏನಾಗಿದೆ ಎಂದರೆ, 371 ಕಿ.ಮೀ. ಕಾಮಗಾರಿಯಲ್ಲಿ ಸುಮಾರು 200 ಕಿ.ಮೀ. ಕೆಲಸವನ್ನು ಇವತ್ತಿನ ದಿವಸ trace

ಮಾಡಬೇಕಾಗಿದೆ. ಏಕೆಂದರೆ, ನಮ್ಮ Urban DDLR ರವರಿಂದ ಆ ನದಿಯ ಪಾತ್ರವನ್ನು ಟ್ರೇಸ್ ಮಾಡಿಕೊಂಡು ಕೆಲಸವನ್ನು ನಾವು ಮಾಡಬೇಕಾಗಿದೆ. ಅದಕ್ಕೆ ಅವರ ಸಹಾಯವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಕೇಳಿದಂತೆ ನಮ್ಮ ಕಾವೇರಿ ನಿಗಮದಲ್ಲಿ sufficient staff ಇದೆ. ನಮಗೆ ಈಗ ಬೇಕಾಗಿರುವುದು ಏನೆಂದರೆ, ರೆವಿನ್ಯು ಸರ್ವೆ ಮ್ಯಾಪ್‌ನಲ್ಲಿ 200 ಕಿ.ಮೀ. ನಷ್ಟು ಕಾಲುವೆಯನ್ನು ಟ್ರೇಸ್ ಮಾಡಿಕೊಟ್ಟರೆ ಆ ಕೆಲಸ ಸುಗಮವಾಗಿ ಆಗುತ್ತದೆ. ಮಾನ್ಯ ಶಾಸಕರು ಈ ಬಗ್ಗೆ ಒಂದು ಹೇಳಿಕೆ ಕೊಟ್ಟಿರುವಂಥದ್ದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹೆಸರಘಟ್ಟ ಕೆರೆಗೆ ಸುಮಾರು 20 ವರ್ಷಗಳಿಂದ ನೀರು ಬಂದಿರಲಿಲ್ಲ. 3.5 ಟಿ.ಎಂ.ಸಿ. ಕೆಪಾಸಿಟಿ ಇರುವ ಜಲಾಶಯಕ್ಕೆ ಈಗ 1 ಟಿ.ಎಂ.ಸಿ. ಯಷ್ಟು ನೀರು ಬಂದಿದೆ. ತಿಪ್ಪಗೊಂಡನಹಳ್ಳಿ ಜಲಾಶಯ ಸುಮಾರು 3 ಟಿ.ಎಂ.ಸಿ. ಯಷ್ಟು ಕೆಪಾಸಿಟಿ ಇದೆ. ಈಗ ಅಲ್ಲಿ 1.5 ಟಿ.ಎಂ.ಸಿ. ಯಷ್ಟು ನೀರು ಬಂದಿದೆ. ಅಲ್ಲಿಯು ಕೂಡ ಕಳೆದ 20 ವರ್ಷಗಳಿಂದ ನೀರು ಬಂದಿರಲಿಲ್ಲ. 15,000 ಕ್ಯಾಚ್‌ಮೆಂಟ್ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 394 ಕೆರೆಗಳು ಬರುತ್ತವೆ. ಅದರಲ್ಲಿ 80 ಕೆರೆಗಳು ಸಂಪೂರ್ಣವಾಗಿ ತುಂಬಿವೆ. 135 ಕೆರೆಗಳಲ್ಲಿ 80% ನಷ್ಟು ತುಂಬಿವೆ. 120 ಕೆರೆಗಳು 70% ನಷ್ಟು ತುಂಬಿವೆ. ಉಳಿದಂಥ ಕೆರೆಗಳು ಸುಮಾರು 59 ರಿಂದ 60% ನಷ್ಟು ತುಂಬಿವೆ. ಇದರಲ್ಲಿ ಎರಡು ಕಾರಣಗಳಿವೆ. ಅಂದರೆ, ಕೆಲಸ ಮತ್ತು ಮಳೆಯಿಂದ ನೀರು ಅಲ್ಲಿಗೆ ಬಂದಿದೆ. ಏಕೆಂದರೆ, ಕಳೆದ 20 ವರ್ಷಗಳಲ್ಲಿ ಸಾಕಷ್ಟು ಮಳೆ ಆಗಿದೆ. ಆದರೆ, ಆ ಸಂದರ್ಭದಲ್ಲಿ ಈ ವ್ಯಾಪ್ತಿಯಲ್ಲಿರುವ ಕೆರೆಗಳು ತುಂಬಿರಲಿಲ್ಲ. ಈಗ ಕೆಲಸ ಕೂಡ ಆಗಿದೆ ಹಾಗೆಯೇ ಮಳೆ ಸಹ ಬಂದಿದ್ದರಿಂದ ಕೆರೆಗಳು ತುಂಬಿವೆ. ಅರ್ಕಾವತಿ ನದಿ ಪಾತ್ರವನ್ನು ಥೇಮ್ಸ್ ನದಿ ತೀರದಲ್ಲಿ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ Global Expression of Interest ಕರೆದಿದ್ದೇವೆ. ಆ Global Expression of Interest ನಲ್ಲಿ ಬಹಳಷ್ಟು ಜನ participate ಮಾಡಿದ್ದಾರೆ. ಅದರ evaluation ಪ್ರಕ್ರಿಯೆ ನಡೆಯುತ್ತಿದೆ.

ಅಧ್ಯಕ್ಷರು:– ಮಾನ್ಯ ಸಚಿವರೇ, ಪ್ರಶ್ನೆ ಕಾಲದಲ್ಲಿ ಚರ್ಚೆಗೆ ಉತ್ತರ ಕೊಟ್ಟಂತೆ ಉತ್ತರ ಕೊಡುವುದಕ್ಕೆ ಹೋಗಬೇಡಿ. ಮಾನ್ಯ ಸದಸ್ಯರು ಏನು ಕೇಳುತ್ತಾರೆಯೋ ಅದಕ್ಕೆ script ಆಗಿ ಉತ್ತರ ಕೊಡಿ.

ಶ್ರೀ ಎಂ.ಬಿ. ಪಾಟೀಲ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಕೇಳಿದ್ದರು. ಇದನ್ನು Global Expression of Interest ಕರೆದಿದ್ದೇವೆ. ಅದರ evaluation ಈಗ ನಡೆಯುತ್ತಿದೆ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ, ಕಾಲುವೆಗಳ ಪುನಶ್ಚೇತನ ಆದ ಮೇಲೆ ಕೆರೆಗಳಿಗೆ ಸ್ವಲ್ಪ ನೀರು ಬಂದಿದ್ದು, ಒಟ್ಟಿನಲ್ಲಿ ಈ ಪ್ರಕ್ರಿಯೆ ಯಶಸ್ವಿಯಾಗಿದೆ. ಆದರೆ, ಒಟ್ಟಾರೆಯಾಗಿ 1319 ಕಿ.ಮೀ. ನಲ್ಲಿ ಕೆಲವು ಕಡೆ ಕೆಲಸ ಆಗಿಲ್ಲ. ಏಕೆಂದರೆ, ನನ್ನ ಕ್ಷೇತ್ರದಲ್ಲಿ ನಾನು ಹೋಗಿ ನೋಡಿದ್ದೇನೆ. ಆದ್ದರಿಂದ, ಈ ಬಗ್ಗೆ ಮತ್ತೊಂದು ಸಾರಿ ತನಿಖೆ ಮಾಡಬೇಕೆಂದು ಕೇಳುತ್ತೇನೆ, ಹಾಗೆಯೇ ಕಾಮಗಾರಿ ಕೂಡ ಸರಿಯಾಗಿ ಆಗುವುದರ ಬಗ್ಗೆ ವಿಶೇಷವಾದ ಮುತುವರ್ಜಿಯನ್ನು ವಹಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಬಿ. ಪಾಟೀಲ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ತಾವು ಎಲ್ಲೆಲ್ಲಿ ಹೇಳುತ್ತೀರೋ ಅಲ್ಲಿ ಗಮನ ಹರಿಸಬೇಕೆಂದು ಕಾವೇರಿ ನಿಗಮದ ಎಂ.ಡಿ. ಯವರಿಗೆ ಹೇಳುತ್ತೇನೆ.

ಶ್ರೀ ಎಸ್.ಆರ್. ವಿಶ್ವನಾಥ್:– ಜಿಲ್ಲಾ ಪಂಚಾಯತ್ ಇಂಜಿನಿಯರ್ ಗಳನ್ನು ಜೊತೆಯಲ್ಲಿ ಸೇರಿಸಿಕೊಂಡು ಮಾಡಬೇಕು.

ಶ್ರೀ ಎಂ.ಬಿ. ಪಾಟೀಲ:– ಸೇರಿಸಿಕೊಳ್ಳಬೇಕಾದ್ದಲ್ಲಿ ಅವರನ್ನು ಸಹ ಸೇರಿಸಿಕೊಳ್ಳುತ್ತೇವೆ.